# APRIL 18, 2024

## ALL INDIA RADIO- DHARWAD

## PRADESH SAMACHARA (KANNADA) 7:05 AM

<><><>

**ಆಕಾಶವಾಣಿ–ಪ್ರದೇಶ ಸಮಾಚಾರ**

<><><>

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಇಂದು ಮತ್ತು ನಾಳೆ,** ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಿಂದ, ರಾಜ್ಯಾದ್ಯಂತ ವಿಶೇಷ ಆಂದೋಲನ.
- **ಹಲವು ಜಿಲ್ಲೆಗಳಲ್ಲಿ ತೀವ್ರ ಬರ;** ಸಾರ್ವಜನಿಕರ ಸಮಸ್ಯೆ ತುರ್ತು ಪರಿಹರಿಸಲು, ಉಚಿತ ಸಹಾಯವಾಣಿ 1–9–5–0.
- **18ನೇ ಲೋಕಸಭೆ ಚುನಾವಣೆ;** ಗಮನ ಸೆಳೆದ, ಜನ ಸಹಭಾಗಿತ್ವದ ಮತದಾರ ಜಾಗ್ರತಿ ಜಾಥಾ.
- **ನಾಮಪತ್ರ ಸಲ್ಲಿಕೆಯ** ನಾಲ್ಕನೇ ದಿನ; ಹಲವು ಉಮೇದುವಾರರಿಂದ ನಾಮಪತ್ರ ಸಲ್ಲಿಕೆ.

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದ ಕೆಲವು ಪ್ರದೇಶಗಳಲ್ಲಿ** ಕಾಲರಾ ಪ್ರಕರಣಗಳು ವರದಿಯಾಗುತ್ತಿರುವ ಹಿನ್ನೆಲೆ, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆ, ಮುಂಜಾಗ್ರತಾ ಕ್ರಮವಾಗಿ, ಪರಿಶೀಲನೆ ಆರಂಭಿಸಿದೆ. ಇಂದು ಮತ್ತು ನಾಳೆ, ಎಲ್ಲ ಜಿಲ್ಲೆಗಳ ಆಹಾರ ಸುರಕ್ಷತಾಧಿಕಾರಿಗಳು, ರಾಜ್ಯಾದ್ಯಂತ ಆಹಾರ ಪದಾರ್ಥಗಳ ಮಾದರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸಂಗ್ರಹಿಸಿ, ವಿಶ್ಲೇಷಣೆಗಾಗಿ ಸಲ್ಲಿಸಲು, ವಿಶೇಷ ಆಂದೋಲನವನ್ನು ಕೈಗೊಂಡಿದ್ದಾರೆ. ಆಹಾರ ಪದಾರ್ಥ ತಯಾರಿಸಿ ಮಾರಾಟ ಮಾಡುವ ಮಳಿಗೆಗಳಿಂದ, ರಾಜ್ಯಾದ್ಯಂತ ವೈದ್ಯಕೀಯ, ಇಂಜಿನಿಯರಿಂಗ್ ಹಾಗೂ ಸ್ನಾತಕೋತ್ತರ ಹಾಸ್ಟೆಲ್‌ಗಳಲ್ಲಿ ವಿತರಿಸಲಾಗುತ್ತಿರುವ, ಆಹಾರ ಪದಾರ್ಥಗಳ ಗುಣಮಟ್ಟ ಪರಿಶೀಲನೆ ಕೈಗೊಳ್ಳುತ್ತಿದೆ. ರಾಜ್ಯಾದ್ಯಂತ ವೈದ್ಯಕೀಯ, ಇಂಜಿನಿಯರಿಂಗ್ ಹಾಗೂ ಸ್ನಾತಕೋತ್ತರ ವಸತಿ ನಿಲಯಗಳಲ್ಲಿ ಒದಗಿಸಲಾದ, 128 ನೀರಿನ ಮಾದರಿಗಳನ್ನು ಮತ್ತು 413 ಆಹಾರ ಪದಾರ್ಥಗಳ ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಣೆಗಾಗಿ ಪ್ರಯೋಗಾಲಯಕ್ಕೆ ರವಾನಿಸಲಾಗಿದೆ. ಫಲಿತಾಂಶ ನಿರೀಕ್ಷಿಸಲಾಗುತ್ತಿದೆ. ರಾಜ್ಯಾದ್ಯಂತ ಆಹಾರ ಮಳಿಗೆಗಳಿಂದ 157 ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗಾಗಿ ಪ್ರಯೋಗಾಲಯಕ್ಕೆ ರವಾನಿಸಲಾಗಿದ್ದು, ವಿಶ್ಲೇಷಣಾ ಕಾರ್ಯ ಮುಂದುವರೆದಿದೆ.

<><><>

**ಕಾರವಾರ ಜಿಲ್ಲೆಯಾದ್ಯಂತ ಕುಡಿಯುವ** ನೀರಿನ ಸಮಸ್ಯೆ ಕಂಡುಬಂದಿದ್ದು, ಗ್ರಾಮಗಳಿಗೆ ಟ್ಯಾಂಕರ್ ಮೂಲಕ, ಸಾರ್ವಜನಿಕರಿಗೆ ಕುಡಿಯುವ ನೀರು ಒದಗಿಸುವಂತೆ, ತಹಸೀಲ್ದಾರರಿಗೆ ಉತ್ತರಕನ್ನಡ ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ ನಿರ್ದೇಶನ ನೀಡಿದ್ದಾರೆ.

**ಬರ ನಿರ್ವಹಣೆ ಸಮಸ್ಯೆಗಳಿದ್ದಲ್ಲಿ,** ಉಚಿತ ಸಹಾಯವಾಣಿ ಸಂಖ್ಯೆ 1950 ಗೆ ಕರೆ ಮಾಡಬಹುದು ಎಂದು, ಅವರು ಹೇಳಿದ್ದಾರೆ. ಕುಡಿಯುವ ನೀರಿನ ಸಮಸ್ಯೆ ತಲೆದೋರಿದ ಗೋಕರ್ಣ, ನಡುಮಸ್ಕೇರಿ, ಹೆಗಡೆ, ಕುಜಣಿ ಸೇರಿದಂತೆ ಹಲವು ಗ್ರಾಮಗಳಲ್ಲಿ, ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

<><><>

**ಗದಗ ಜಿಲ್ಲೆಯಲ್ಲಿ ಬರಗಾಲವಿದ್ದು,** ಕುಡಿಯುವ ನೀರು ಮತ್ತು ಮೇವಿನ ನಿರ್ವಹಣೆ ಸಮರ್ಪಕವಾಗಿ ಕೈಗೊಳ್ಳುವಂತೆ, ಗದಗ ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಸಿ. ಬಿ. ದೇವರಮನಿ, ಪಿ.ಡಿ.ಒ.ಗಳಿಗೆ ಸೂಚಿಸಿದ್ದಾರೆ.

<><><>

**ಚಾಮರಾಜನಗರ ಜಿಲ್ಲೆಯಲ್ಲಿ** ಜಾನುವಾರುಗಳಿಗೆ ಕುಡಿಯುವ ನೀರಿನ ಕೊರತೆ ಉಂಟಾಗಿದ್ದು, ಪಶುಪಾಲನಾ ಇಲಾಖೆಯ ಅಧಿಕಾರಿಗಳೊಂದಿಗೆ, ಸಮನ್ವಯ ಸಾಧಿಸಿ, ನೀರಿನ ವ್ಯವಸ್ಥೆ ಮಾಡುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ನಿರ್ದೇಶಿಸಿದ್ದಾರೆ.

<><><>

**ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ** ಪ್ರಕಟಣೆ ಪ್ರಕಾರ, ಈ ಬಾರಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗುವ ಸಾಧ್ಯತೆಯಿದೆ. ಜೂನ್ ವೇಳೆಗೆ ರಾಜ್ಯದಲ್ಲಿ ನೀರಿನ ಸಮಸ್ಯೆ ದೂರವಾಗಲಿದೆ. ಮುಂಗಾರು ವಾಡಿಕೆ ಮಳೆ ಪ್ರಮಾಣ ಸರಾಸರಿ, 85 ದಶಾಂಶ 2 ಸೆಂಟಿ ಮೀಟರ್ ಮಳೆಯಾಗಲಿದೆ ಎಂದು ಅಂದಾಜಿಸಲಾಗಿದೆ.

<><><>

**2023ನೇ ಸಾಲಿನ, ಯೂ.ಪಿ.ಎಸ್.ಸಿ.,** ನಾಗರಿಕ ಸೇವಾ ಪರೀಕ್ಷೆಯಲ್ಲಿ, ವಿಜಯಪುರ ಜಿಲ್ಲೆ, ದೇವರ ಹಿಪ್ಪರಗಿ ತಾಲೂಕಿನ, ಜಾಲವಾದ ಗ್ರಾಮದ, ವಿಜೇತಾ ಹೊಸಮನಿ, 100ನೇ ರ‍್ಯಾಂಕ್ ಗಳಿಸಿದ್ದಾರೆ. ಪ್ರಸ್ತುತ ಅವರು, ಧಾರವಾಡ ಜಿಲ್ಲೆ, ಹುಬ್ಬಳ್ಳಿಯ ನಿವಾಸಿ. ಆಕಾಶವಾಣಿಗೆ ಅವರು ತಮ್ಮ ಖುಷಿ ಹಂಚಿಕೊಂಡಿದ್ದಾರೆ.

<><><>

**ಕೊಪ್ಪಳ ಜಿಲ್ಲೆ, ಯಲಬುರ್ಗಾ ತಾಲೂಕು,** ಮುಧೋಳ ಗ್ರಾಮದ, ಸೌಭಾಗ್ಯಾ ಬೀಳಗಿಮಠ, ನಾಗರಿಕಾ ಸೇವಾ ಪರೀಕ್ಷೆಯಲ್ಲಿ 101ನೇ ರ‍್ಯಾಂಕ್ ಗಳಿಸಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದ, 371 ಜೆ ವಿಧಿ ಅಡಿ, ಅವಕಾಶ ಪಡೆದು, ಆಯ್ಕೆಯಾಗಿರುವ ಸೌಭಾಗ್ಯಾ ಪ್ರಸ್ತುತ ದಾವಣಗೆರೆ ನಿವಾಸಿ. ಪ್ರದೇಶ ಸಮಾಚಾರಕ್ಕಾಗಿ ಅವರು, ತಮ್ಮ ಸಂತಸ ವ್ಯಕ್ತಪಡಿಸಿದ್ದಾರೆ.

<><><>

**ಸೌಭಾಗ್ಯಾ ಬೀಳಗಿಮಠ 45 ಸೆಕೆಂದುಗಳು**

<><><>

**ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..**

<><><>

**18ನೇ ಲೋಕಸಭೆ ಸಾರ್ವತ್ರಿಕ ಚುನಾವಣೆಯಲ್ಲಿ,** ಅತೀ ಹೆಚ್ಚು ಮತದಾನ ಈ ಬಾರಿ ಖಾತ್ರಿ ಪಡಿಸಿ, ಪ್ರಜಾಪ್ರಭುತ್ವ ಬಲ ಪಡಿಸಲು, ರಾಜ್ಯಾದ್ಯಂತ ಜಿಲ್ಲಾವಾರು ಸ್ವೀಪ್ ಸಮಿತಿಗಳು, ವಿಶಿಷ್ಟ ಕಾರ್ಯಕ್ರಮ ಆಯೋಜಿಸಿ, ಗಮನ ಸೆಳೆಯುತ್ತಿವೆ. ಜನ ಸಹಭಾಗಿತ್ವದಲ್ಲಿ ಮತದಾರ ಜಾಗ್ರತಿ ಜಾಥಾ ಆಯೋಜಿತವಾಗಿವೆ.

<><><>

**ಆಕಾಶವಾಣಿ ಕಲಾವಿದ ಹಾಗೂ ಜನಪದ ತಜ್ಞ** ಹುಬ್ಬಳ್ಳಿಯ ಡಾಕ್ಟರ್ ರಾಮಣ್ಣ ಮೂಲಗಿ, ಮತದಾನ ಜಾಗ್ರತಿ ಹಾಡುಗಳ ಮೂಲಕ, ಅಮರಗೋಳದ ಹಮಾಲರ ಕಾಲೋನಿಯಲ್ಲಿ ಜಾಗ್ರತಿ ಮೂಡಿಸುತ್ತಿದ್ದಾರೆ.

<><><>

**ಡಾ. ರಾಮಣ್ಣ ಮೂಲಗಿ 25 ಸೆಕೆಂದುಗಳು**

<><><>

**ದೃಷ್ಟಿ ವಿಶೇಷ ಚೇತನರಿಗಾಗಿ,** ಈ ಬಾರಿ ಚುನಾವಣಾ ಆಯೋಗ ಬ್ರೈಲ್ ಲಿಪಿ ಅಳವಡಿಸಿದೆ. ಯಾರ ಸಹಾಯವೂ ಇಲ್ಲದೇ, ಮತ ಚಲಾಯಿಸಲು ಅವರಿಗೆ ಅವಕಾಶ ಲಭ್ಯವಾಗಲಿದೆ.

ಈ ಕುರಿತು ಪ್ರದೇಶ ಸಮಾಚಾರಕ್ಕಾಗಿ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಬೆಳಗಾವಿ ಜಿಲ್ಲೆ ಬೈಲಹೊಂಗಲದ ಸಿದ್ಧಲಿಂಗೇಶ್ವರ ಇಂಗಳಗಿ.

<><><>

**ಸಿದ್ಧಲಿಂಗೇಶ್ವರ ಇಂಗಳಗಿ 26 ಸೆಕೆಂದುಗಳು**

<><><>

**ಬೆಳಗಾವಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ,** ಜಗದೀಶ್ ಶೆಟ್ಟರ್ ಬೆಳಗಾವಿ ಜಿಲ್ಲಾ ಚುನಾವಣಾಧಿಕಾರಿ ನಿತೇಶ್ ಪಾಟೀಲ ಅವರಿಗೆ ನಾಮಪತ್ರ ಸಲ್ಲಿಸಿದರು.

**ಬೀದರ್ ಲೋಕಸಭಾ ಕ್ಷೇತ್ರದ ಕಾಂಗ್ರೆಸ್** ಪಕ್ಷದ ಅಭ್ಯರ್ಥಿ ಸಾಗರ್ ಖಂಡ್ರೆ ಅವರು ಮೊನ್ನೆ ಸರಳವಾಗಿ ನಾಮಪತ್ರ ಸಲ್ಲಿಸಿದ್ದು, ನಿನ್ನೆ ಬೃಹತ್ ಮೆರವಣಿಗೆ ಮೂಲಕ ಮತ್ತೊಮ್ಮೆ ನಾಮಪತ್ರ ಸಲ್ಲಿಸಿದರು.

**ಇಂದು ಬೀದರ್‌ನಲ್ಲಿ ಬಿಜೆಪಿಯ** ಭಗವಂತ ಖೂಬಾ ನಾಮಪತ್ರ ಸಲ್ಲಿಸಲಿದ್ದಾರೆ. ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ದೇವೇಂದ್ರ ಫಡ್ನವೀಸ್ ಪಾಲ್ಗೊಳ್ಳುವ ನಿರೀಕ್ಷೆ ಇದೆ.

**ನಾಮಪತ್ರ ಸಲ್ಲಿಕೆಯ** ನಾಲ್ಕನೇ ದಿನವಾದ ನಿನ್ನೆ, ಮೂವರು ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ ಎಂದು, ಕಲಬುರಗಿ ಜಿಲ್ಲಾ ಚುನಾವಣಾಧಿಕಾರಿ ಬಿ. ಫೌಜಿಯಾ ತರನ್ನುಮ್ ತಿಳಿಸಿದ್ದಾರೆ.

**ಶಿವಮೊಗ್ಗದಲ್ಲಿ ನಾಲ್ವರು ಅಭ್ಯರ್ಥಿಗಳು ಹಾಗೂ ಬಾಗಲಕೋಟೆಯಲ್ಲಿ ಮೂವರು** ನಾಮಪತ್ರ ಸಲ್ಲಿಸಿ, ತಮ್ಮ ಉಮೇದುವಾರಿಕೆ ಪ್ರಕಟಿಸಿದ್ದಾರೆ.

**ಧಾರವಾಡ ಲೋಕಸಭಾ ಮತಕ್ಷೇತ್ರದಿಂದ ಸ್ಪರ್ಧಿಸ ಬಯಸಿ,** ಐದು ಜನ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

**ಬಳ್ಳಾರಿ ಲೋಕಸಭಾ ಕ್ಷೇತ್ರದಿಂದ,** ಸ್ಪರ್ಧಿಸಲು ಬಯಸಿ, ಈ ವರೆಗೆ 9 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ.

**ಇದೇ 19 ರಿಂದ, ಜೂನ್ 01 ನೇ ತಾರೀಖು** ಸಂಜೆ 6.30ರ ವರೆಗಿನ ಅವಧಿಯಲ್ಲಿ, ಮತದಾನಕ್ಕೆ ಸಂಬಂಧಪಟ್ಟ ಅಭಿಪ್ರಾಯ ಆಧರಿಸಿದ, ಸಮೀಕ್ಷೆಗಳು ಸೇರಿದಂತೆ, ಯಾವುದೇ ಸಮೀಕ್ಷೆಯ ಫಲಿತಾಂಶವನ್ನು ಪ್ರಸಾರ ಮಾಡುವಂತಿಲ್ಲ ಎಂದು, ಉಪ ಮುಖ್ಯ ಚುನಾವಣಾಧಿಕಾರಿ ನವೀನ್ ಜೋಸೆಫ್ ಸ್ಪಷ್ಟ ಪಡಿಸಿದ್ದಾರೆ.

<><><>

**ಅಗ್ನಿ ಪಥ್ ಯೋಜನೆಯಡಿ,** ಬೆಂಗಳೂರಿನಲ್ಲಿ ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ, ಮೂರನೇ ತುಕಡಿಯ ಬೀಳ್ಕೊಡುಗೆ ಸಮಾರಂಭ ನಡೆಯಿತು. ಪ್ಯಾರಾಚೂಟ್ ರೆಜಿಮೆಂಟ್ ತರಬೇತಿ ಕೇಂದ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ, 3ನೇ ತಂಡದ ಒಟ್ಟು 427 ಅಗ್ನಿವೀರರು ತರಬೇತಿ ಪೂರ್ಣಗೊಳಿಸಿ, ನಿರ್ಗಮನ ಪಥ ಸಂಚಲನದಲ್ಲಿ ಪಾಲ್ಗೊಂಡರು. ಮೇಜರ್ ಜನರಲ್ ರವಿ ಮುರುಗನ್ ಗೌರವ ವಂದನೆ ಸ್ವೀಕರಿಸಿದರು.

<><><>

**ಚೈತ್ರ ಮಾಸದ ಶುಕ್ಲ ಪಕ್ಷದ ಒಂಬತ್ತನೇ** ದಿನವಾದ ನಿನ್ನೆ, ಭಗವಾನ್ ಶ್ರೀರಾಮನ ಜನ್ಮ ದಿನವನ್ನು ದೇಶಾದ್ಯಂತ ಶ್ರದ್ಧಾ, ಭಕ್ತಿಯಿಂದ ಆಚರಿಸಲಾಯಿತು. ಚೈತ್ರ ಮಾಸದ ಶುಕ್ಲ ಪಕ್ಷದ ಪಾಡ್ಯದಿಂದ, ನವಮಿ ವರೆಗೆ ರಾಮಾಯಣವನ್ನು ಭಕ್ತಿ, ಶ್ರದ್ಧೆಗಳಿಂದ ಪಾರಾಯಣ ಮಾಡಿ, ನವಮಿ ದಿನ, ಶ್ರೀ ರಾಮ ಪಟ್ಟಾಭಿ ೇಕ ಪಾರಾಯಣ ಮಾಡಿ, ಹಬ್ಬದಾಚರಣೆ ಪೂರ್ಣಗೊಳಿಸಲಾಗುತ್ತದೆ. ರಾಜ್ಯದ ಶ್ರೀ ರಾಮ ಮಂದಿರಗಳಲ್ಲಿ ಎಲ್ಲರಿಗೂ ಕೋಸಂಬರಿ, ಮಜ್ಜಿಗೆ ಹಾಗೂ ಪಾನಕ ಹಂಚುವ ಮೂಲಕ, ಸೌಹಾರ್ದತೆ ಮೆರೆದು, ವಸುಧೈವ ಕುಟುಂಬಕಂ, ಇಡೀ ವಿಶ್ವವೇ ಒಂದು ಕುಟುಂಬ ಎಂಬುದನ್ನು, ಜಗತ್ತಿಗೆ ಸಾರಿ ಹೇಳುವ ಹಬ್ಬದಂತೆ, ರಾಮ ನವಮಿ ಆಚರಿಸಿದ ವರದಿಗಳು ಬಂದಿವೆ.

<><><>

**ಈಗ ಸಂಕ್ಷಿಪ್ತ ಸುದ್ದಿಗಳು:**

<><><>

**ಇಂದು ವಿಶ್ವ ಪರಂಪರೆ ದಿನ.**

<><><>

**ನಟ, ನಿರ್ಮಾಪಕ, ನಿರ್ದೇಶಕ ದ್ವಾರಕೀಶ್** ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆ, ನಿನ್ನೆ ಮಧ್ಯಾಹ್ನ ಬೆಂಗಳೂರಿನ ಚಾಮರಾಜಪೇಟೆಯ ಚಿತಾಗಾರದಲ್ಲಿ ಸಕಲ ಸರ್ಕಾರಿ ಗೌರವಗಳೊಂದಿಗೆ ನಡೆಯಿತು.

<><><>

**ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ,** ಇಂದು ಮತ್ತು ನಾಳೆ, ರಾಜ್ಯದ 31 ಜಿಲ್ಲೆಗಳ ಪರೀಕ್ಷಾ ಕೇಂದ್ರಗಳಲ್ಲಿ, ಸಿ.ಇ.ಟಿ – ಸಾಮಾನ್ಯ ಪ್ರವೇಶ ಪರೀಕ್ಷೆಗಳು ನಡೆಯಲಿವೆ.

<><><>

**ಇದೇ ತಿಂಗಳು 29 ರಿಂದ,** ದ್ವಿತೀಯ ಪಿಯೂಸಿ ಪೂರಕ ಪರೀಕ್ಷೆಗಳು ರಾಜ್ಯಾದ್ಯಂತ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ನಡೆಯಲಿವೆ.

<><><>

**ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:**

<><><>

- **ಇಂದು ಮತ್ತು ನಾಳೆ,** ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯಿಂದ, ರಾಜ್ಯಾದ್ಯಂತ ವಿಶೇಷ ಆಂದೋಲನ.
- **ಹಲವು ಜಿಲ್ಲೆಗಳಲ್ಲಿ ತೀವ್ರ ಬರ;** ಸಾರ್ವಜನಿಕರ ಸಮಸ್ಯೆ ತುರ್ತು ಪರಿಹರಿಸಲು, ಉಚಿತ ಸಹಾಯವಾಣಿ 1–9–5–0.
- **18ನೇ ಲೋಕಸಭೆ ಚುನಾವಣೆ;** ಗಮನ ಸೆಳೆದ, ಜನ ಸಹಭಾಗಿತ್ವದ ಮತದಾರ ಜಾಗ್ರತಿ ಜಾಥಾ.
- **ನಾಮಪತ್ರ ಸಲ್ಲಿಕೆಯ** ನಾಲ್ಕನೇ ದಿನ; ಹಲವು ಉಮೇದುವಾರರಿಂದ ನಾಮಪತ್ರ ಸಲ್ಲಿಕೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.**

<><><>